

# ಗ್ರಾಮಗಳ ಉದ್ಧಾರದ ಹಂಬಲದಲ್ಲಿ ಪರೀಕ್ಷೆ ಬರೆದೆ

**2023ರ ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ 362ನೇ ರ‍್ಯಾಂಕ್ ಪಡೆದ ಶ್ರುತಿ ಯರಗಟ್ಟಿ ಅವರ ಸಂದರ್ಶನ**

■ ರಾಘವೇಂದ್ರ ಕೆ.

ಚಿತ್ರ: ಬಿ.ಕೆ. ಜನಾರ್ದನ್

◆ **ನಿಮ್ಮ ಪರಿಚಯ ಹೇಳಿ?**

ಅಪ್ಪ ಶಿವಾನಂದ ಯರಗಟ್ಟಿ, ಶಿಕ್ಷಕರಾಗಿದ್ದರು. ಅಮ್ಮ ಮಹಾನಂದ ಯರಗಟ್ಟಿ. ತಂದೆ ನಿವೃತ್ತಿ ನಂತರ ನಮ್ಮ ಕುಟುಂಬ ಮೂಡಲಗಿ ತಾಲ್ಲೂಕಿನ ಅರಭಾವಿಯಲ್ಲಿ ನೆಲೆಸಿದೆ. ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ನಾಗರಿಕ ಸೇವಾ ಪರೀಕ್ಷೆಯಲ್ಲಿ, ನನ್ನ 6ನೇ ಪ್ರಯತ್ನದಲ್ಲಿ 362ನೇ ರ‍್ಯಾಂಕ್ ಗಳಿಸಿದ್ದೇನೆ. ಐಎಎಸ್ ಅಥವಾ ಐಪಿಎಸ್ ಸೇವೆಗೆ ಆಯ್ಕೆ ಆಗಬಹುದೆಂದು ನಿರೀಕ್ಷಿಸಿದ್ದೇನೆ. ಹುಕ್ಕೇರಿ ತಾಲ್ಲೂಕಿನ ಶಿರಢಾಣದ ಗಂಗಾಧರ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ 1ರಿಂದ 10ನೇ ತರಗತಿಯವರೆಗೆ ಓದಿದೆ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪಿಯುಸಿ ಮತ್ತು ಬಿ.ಎಸ್ಸಿ. ಓದಿದೆ.

◆ **ಶಾಲಾ ದಿನಗಳಲ್ಲಿ ನೀವೆಷ್ಟು ಜಾಣರಾಗಿದ್ದಿರಿ?**

ನಾನು ಒಂದನೇ ತರಗತಿಯಿಂದ ಬಿ.ಎಸ್ಸಿ. ಮುಗಿಸುವ ತನಕ ಟಾಪರ್ ಆಗಿದ್ದೆ. ಬಿ.ಎಸ್ಸಿ.ಯಲ್ಲಿ 7 ಚಿನ್ನದ ಪದಕಗಳನ್ನು ಪಡೆದಿದ್ದೆ.

◆ **ಶಾಲಾ ದಿನಗಳ ಓದು–ಹವ್ಯಾಸದ ಬಗ್ಗೆ ಹೇಳಿ...**

ಹೆಚ್ಚು ಓದುತ್ತಿದ್ದೆ. ಶಾಲಾ ದಿನಗಳಲ್ಲಿಯೇ ವಿಸ್ಡಮ್ (wisdom) ಎಂಬ ಇಂಗ್ಲಿಷ್ ನಿಯತಕಾಲಿಕೆ ಓದಲು ಆರಂಭಿಸಿದೆ. ಅದರಿಂದ ನನ್ನ ಇಂಗ್ಲಿಷ್ ಸುಧಾರಿಸಿತು. ‘ಪ್ರಜಾವಾಣಿ’ಯನ್ನು ಓದುತ್ತಿದ್ದೆ. ಇದು ಸ್ಪರ್ಧಾ ಪರೀಕ್ಷೆಗೆ ಉತ್ತಮ ಎನಿಸುತ್ತದೆ. ಪಿಯುಸಿಗೆ ಬಂದ ಮೇಲೆ ಇಂಗ್ಲಿಷ್ ಪತ್ರಿಕೆಯನ್ನು ಓದಲು ಶುರುಮಾಡಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದೆ. ಹಾಡು ಹೇಳುತ್ತಿದ್ದೆ.

◆ **ವಿಜ್ಞಾನ ಪದವಿ ಪಡೆದ ನೀವು ಮಾನವಶಾಸ್ತ್ರವನ್ನು (anthropology) ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣ ಏನು?**

ನಾನು ಎಂ.ಎಸ್ಸಿ. ಮಾಡಲಿಲ್ಲ. ವಿಜ್ಞಾನ ವಿಷಯಗಳು ಆಳವಾದ ತಾಂತ್ರಿಕ ಅಂಶವನ್ನು ಒಳಗೊಂಡಿರುತ್ತವೆ. ಅದಕ್ಕೆ ಸ್ನಾತಕೋತ್ತರ ಪದವಿ ಹಂತದ ತಯಾರಿ ಬೇಕಾಗುತ್ತದೆ. ಹೆಚ್ಚಿನ ಸಮಯವನ್ನು ಬಯಸುವ ವಿಷಯಗಳು. ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರಗಳಿಗೆ ಹೋಲಿಸಿದರೆ ತಾಂತ್ರಿಕ ವಿಷಯಗಳಿಗೆ ಮಾರ್ಗದರ್ಶನ ಮತ್ತು ಬೋಧನೆಯ ಸೌಲಭ್ಯ, ಅಧ್ಯಯನ ಸಾಮಗ್ರಿ ಮತ್ತು ಟೆಸ್ಟ್ ಸೀರೀಸ್‌ಗೆ ಅವಕಾಶ ಕಡಿಮೆ ಅನ್ನಿಸಿತು. ಹಾಗಾಗಿ ಮಾನವಶಾಸ್ತ್ರ ಆಯ್ಕೆ ಮಾಡಿದೆ.

◆ **ಸಂದರ್ಶನ ಹೇಗಿತ್ತು?**

ಇದುವರೆಗೆ ಮೂರು ಸಂದರ್ಶನವನ್ನು ನೀಡಿದ್ದೇನೆ. ಸಂದರ್ಶಕರು ತುಂಬ ವಿಷಯಗಳಲ್ಲಿ ಆಳವಾದ ತಿಳಿವಳಿಕೆ ಹೊಂದಿರುತ್ತಾರೆ. ವ್ಯಕ್ತಿತ್ವವನ್ನು ಪರೀಕ್ಷಿಸಲು ಒತ್ತುಕೊಡುತ್ತಾರೆ. ಈ ಬಾರಿ ಸೇನೆಗೆ ಸಂಬಂಧಿಸಿದಂತೆ ‘ಅಗ್ನಿಪಥ’, ‘ಅಗ್ನಿವೀರ್’ ಬಗ್ಗೆ ಕೇಳಿದರು. ಅರ್ಥಶಾಸ್ತ್ರದ ಪ್ರಶ್ನೆಗಳೂ ಇದ್ದವು. ಕರ್ನಾಟಕದವಳು ಎಂದು – ಕರ್ನಾಟಕದ ಕರಾವಳಿಯಲ್ಲಿ ಕೋಮು ಸಂಘರ್ಷ ಹೆಚ್ಚಿದೆ, ಒಬ್ಬ ಪೊಲೀಸ್ ಅಧಿಕಾರಿ ಆದರೆ ಅದನ್ನು ಹೇಗೆ ನಿಭಾಯಿಸುತ್ತೀರಿ? ಟಿಪ್ಪು ಚರಿತ್ರೆಯ ವಿವಾದದಲ್ಲಿ ನೀವು ಯಾವ ವಾದವನ್ನು ಒಪ್ಪುತ್ತೀರಿ? ಎಂದೂ ಕೇಳಿದ್ದರು. ವಿಷಯನಿಷ್ಠವಾಗಿ ಉತ್ತರ ನೀಡಿದೆ. ಒಟ್ಟಾರೆ ತುಂಬ ಖುಷಿ ಕೊಟ್ಟಿತ್ತು. ಒಳ್ಳೆಯ ಅನುಭವ.

◆ **ತರಬೇತಿ ಪಡೆಯದೇ ಟೆಸ್ಟ್ ಸೀರೀಸ್ ಬರಿಯಬೇಕು ಅಂದರೆ ಏನು ಮಾಡಬೇಕು?**

ಬಹುತೇಕ ಯುಪಿಎಸ್‌ಸಿ ತರಬೇತಿ ಕೇಂದ್ರಗಳಲ್ಲಿ ಅದಕ್ಕೆ ಅವಕಾಶ ಇದೆ. ನಮಗೆ ಅನುಕೂಲವಾಗುವ ಯಾವುದಾದರೂ ಒಂದು ಕೇಂದ್ರದಿಂದ ತೆಗೆದುಕೊಳ್ಳಬಹುದು. ಟೆಸ್ಟ್ ಸೀರೀಸ್ ಹಾಜರಾಗುವ ಮುನ್ನವೇ ಆಳವಾಗಿ ಓದಿರಬೇಕು. ಆಗ ಅದರ ಲಾಭ ಸಿಗುತ್ತದೆ. ಆನ್‌ಲೈನ್‌ನಲ್ಲಿಯೂ ತೆಗೆದುಕೊಳ್ಳಬಹುದು. ಇದು ಗ್ರಾಮೀಣ ಪ್ರದೇಶದ ಸ್ಪರ್ಧಾರ್ಥಿಗಳಿಗೆ ತುಂಬ ಅನುಕೂಲ.

◆ **ಐಎಎಸ್/ಐಪಿಎಸ್ ಆಗಬೇಕು ಎಂದು ಏಕೆ ಅನ್ನಿಸಿತು?**

4ನೇ ತರಗತಿ ಓದುವಾಗ ನನ್ನ ಗುರುಗಳಾದ ಸಿದ್ದು ಭಜಂತ್ರಿ ಅವರು ಯುಪಿಎಸ್‌ಸಿ ಪರೀಕ್ಷೆ ಬಗ್ಗೆ ಹೇಳಿದರು. ಅಂದಿನಿಂದ ಇಂದಿನ ತನಕ ನನ್ನನ್ನು ಪ್ರೋತ್ಸಾಹಿಸುತ್ತಿದ್ದಾರೆ. ನನ್ನ ಸಾಮರ್ಥ್ಯವನ್ನು ಗುರುತಿಸಿ ಅವರು ಕನಸಿನ ಬೀಜ ಬಿತ್ತಿದರು. ಸರ್ ಹೇಳಿದ ಮೇಲೆ ನಾನು ಜಿಲ್ಲಾಧಿಕಾರಿ (ಡಿಸಿ), ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಅವರನ್ನು ಸೂಕ್ಷ್ಮವಾಗಿ ಗಮನಿಸಲು ಶುರುಮಾಡಿದೆ. ಅವರ ಕೆಲಸದ ಮಹತ್ವ ಅರ್ಥ ಆಯಿತು. ಬೆಳಗಾವಿ ಜಿಲ್ಲೆಯಲ್ಲಿ ಜಲ ಪ್ರವಾಹವಾದಾಗ ಜೀವ ರಕ್ಷಣೆಗೆ ಜಿಲ್ಲಾಧಿಕಾರಿ ಮಾಡುತ್ತಿದ್ದ ಕೆಲಸ ಗಮನಿಸಿದೆ. ಅದು ನನ್ನನ್ನು ಪ್ರಭಾವಿಸಿದೆ. ಸರ್ಕಾರಿ ಯೋಜನೆಗಳನ್ನು ಅರ್ಹರಿಗೆ ನೀಡುವ ದೊಡ್ಡ ಅವಕಾಶ ಇಲ್ಲಿದೆ ಎಂದು ಗೊತ್ತಾಯಿತು. ಹಳ್ಳಿಯಿಂದ ಬಂದ ನನಗೆ ಸಮಾಜಮುಖಿಯಾಗಿ ಕೆಲಸ ಮಾಡುವ ಅವಕಾಶ ಇಲ್ಲಿದೆ. ಗ್ರಾಮಗಳ ಸಮಸ್ಯೆ ಪರಿಹರಿಸುವ ಅಧಿಕಾರ ಇಂತಹ ಅಧಿಕಾರಿಗಳಲ್ಲಿದೆ. ಹಾಗಾಗಿ ಇದನ್ನೇ ಮಾಡಬೇಕು ಎನ್ನುವ ಪಣತೊಟ್ಟೆ.

◆ **ಪರೀಕ್ಷೆಯ ಸಿದ್ಧತೆ ಹೇಗಿತ್ತು?**

2016ರಿಂದ ಯುಪಿಎಸ್‌ಸಿ ಪರೀಕ್ಷೆ ಬರೆಯುತ್ತಿದ್ದೇನೆ. ಮೊದಲ ಪ್ರಯತ್ನದಲ್ಲಿ ಕೋಚಿಂಗ್ ತೆಗೆದುಕೊಳ್ಳಲಿಲ್ಲ. ಎರಡನೇ ಯತ್ನಕ್ಕೆ ದೆಹಲಿಯಲ್ಲಿ ತರಬೇತಿ ಪಡೆದೆ. ಓದಲು ಸಮಯ ಸಾಕಾಗದೆ ವಿಫಲವಾದೆ. ಮೂರನೇ ಬಾರಿ ಕೂಡ ಪೂರ್ವಭಾವಿ (ಪ್ರಿಲಿಮ್ಸ್) ಪರೀಕ್ಷೆಯನ್ನೂ ಪಾಸ್ ಮಾಡಲಾಗಿರಲಿಲ್ಲ. 4 ಮತ್ತು 5ನೇ ಪ್ರಯತ್ನದಲ್ಲಿ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಪಾಸಾಗಿ ಸಂದರ್ಶನಕ್ಕೂ ಆಯ್ಕೆಯಾದೆ. ಒಟ್ಟಾರೆ ಸ್ಕೋರ್ ಕಡಿಮೆ ಇದ್ದಿದ್ದರಿಂದ ನೇಮಕ ಆಗಲಿಲ್ಲ. ಪ್ರತಿ ಪ್ರಯತ್ನವೂ ನನಗೆ ಪಾಠವಾಗಿತ್ತು. ಓದುವ ವೇಳೆ ಕಡಿಮೆ ಬ್ರೇಕ್ ತೆಗೆದುಕೊಳ್ಳುತ್ತಿದ್ದೆ. ಊರಿಗೂ ಹೋಗುವುದು ತೀರಾ ಕಡಿಮೆ. ದೆಹಲಿಯಿಂದ ಮರಳಿ ಬಂದ ನಾನು ಬೆಂಗಳೂರಿನಲ್ಲೇ ಇದ್ದು ಓದಿದೆ. ದಿನವೂ 10ರಿಂದ 12 ಗಂಟೆ ಓದುತ್ತಿದ್ದೆ. ಬೆಳಿಗ್ಗೆ 8ಕ್ಕೆ ಗ್ರಂಥಾಲಯಕ್ಕೆ ಹೋದರೆ ರಾತ್ರಿ 9ರ ತನಕ ಅಲ್ಲೇ ಇರ್ತಾ ಇದ್ದೆ. ನಿತ್ಯವೂ ಓದಿಗೆ ಪ್ಲಾನ್ ಮಾಡಿಕೊಂಡಿರುತ್ತಿದ್ದೆ. ನನ್ನ ಟಾರ್ಗೆಟ್ ಮುಗಿಯದ ಹೊರತು ನಿದ್ದೆ ಮಾಡ್ತಾ ಇರಲಿಲ್ಲ.

◆ **ಐಚ್ಛಿಕ ವಿಷಯವನ್ನು ಯಾವ ಹಿನ್ನೆಲೆಯಲ್ಲಿ ಆಯ್ಕೆ ಮಾಡಿಕೊಳ್ಳಬೇಕು?**

ಮೊದಲು ವಿಷಯದ ಬಗ್ಗೆ ಆಸಕ್ತಿ ಇರಬೇಕು. 500 ಅಂಕಗಳಿಗೆ ಪರೀಕ್ಷೆ ಇರುತ್ತದೆ. ಇದರಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸುವ ಅವಕಾಶ ಇರುತ್ತದೆ. ಸಾಮಾನ್ಯ ಜ್ಞಾನದಲ್ಲಿ ಈ ಮಟ್ಟದ ಸಾಧನೆಗೆ ಸಾಧ್ಯ ಆಗದೇ ಇರಬಹುದು. ಐಚ್ಛಿಕ ವಿಷಯದಲ್ಲಿ 300ಕ್ಕೂ ಹೆಚ್ಚು ಸ್ಕೋರ್ ಮಾಡಬಹುದು. ದಿನದಲ್ಲಿ ನಾಲ್ಕೈದು ಗಂಟೆ ಇದನ್ನೇ ಓದಬೇಕಾಗುತ್ತದೆ. ಜೊತೆಗೆ ವಿಷಯಕ್ಕೆ ಮಾರ್ಗದರ್ಶನ ಇದೆಯೋ ಇಲ್ಲವೋ, ಅಧ್ಯಯನ ಸಾಮಗ್ರಿ ಸಿಗುತ್ತದೆಯೋ ಇಲ್ಲವೋ ಎಂದು ಯೋಚಿಸಬೇಕು. ಹಿಂದಿನ ಪರೀಕ್ಷೆಗಳಲ್ಲಿ ಟಾಪರ್‌ಗಳು ಯಾವ ವಿಷಯ ತೆಗೆದುಕೊಂಡಿದ್ದರು, ಅಧ್ಯಯನಕ್ಕೆ ಯಾವ ತಂತ್ರ ಬಳಸಿದರು ಎನ್ನುವುದನ್ನೆಲ್ಲ ಗಮನಿಸಬೇಕಾಗುತ್ತದೆ. ■